ಪ್ರಶ್ನೆ ಕೇಳಬೇಕೇ ? ನಾವು ವಿತಕ್ಕೆ ಅಸೆಂಬ್ಲಿಗೆ ಬಂದಿದ್ದೇವೆ ? ದಯಮಾಡಿ ಹೇಳಿ. ನಮ್ಮ ಕ್ಷೇತ್ರದಲ್ಲಿರ ತಕ್ಕ ಕುಂದುಕೊರತೆಗಳಿಗೆ ಸಮಜಾಯಿಷಿ ಉತ್ತರ ಸಿಗಬಹುದೆಂದು ಬಂದಿದ್ದೇವೆ.

ಮಂತ್ರಿಗಳು ಯಾವ ರೀತಿ ಉತ್ತರ ಕೊಡಬೇಕೆಂದು ತಾವೇ ಹೇಳಿಕೊಟ್ಟರೆ, ಮಂತ್ರಿಗಳು ಅದೇ ರೀತಿ ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಆಯವ್ಯಯದ ಮೇಲಿನ ಚರ್ಚೆದುನ್ನು ತೆಗೆದು ಕೊಳ್ಳಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಸಭೆಯ ಸತ್-ಸಂಪ್ರದಾಯಗಳನ್ನು ಕಾಪಾಡಬೇಕಾಗಿದೆ. ಆದ್ದರಿಂದ ಸರ್ಕಾರದವರಿಗೆ ಈ ಪ್ರಶ್ನೆಗೆ ಉತ್ತರ ಕೊಡಲು ಸಾಧ್ಯವಾಗದಿದ್ದರೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು.—ಸರ್ಕಾರಕ್ಕೆ ನಾನೂ ಸಲಹೆ ಕೊಡಬಹುದು ಮತ್ತು ತಾವೂ ಸಹ ಸಲಹೆ ಕೊಡ ಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಇದನ್ನು ಜಾಗ್ರತೆ ಮುಗಿಸಬೇಕಾಗಿದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮ 334ರ ಕೆಳಗೆ ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ ಉತ್ತರ ತಯಾರಿದ್ದರೆ ಕೊಡುತ್ತೇವೆ. ಇಲ್ಲದಿದ್ದರೆ ಸಮಯ ಕೇಳುತ್ತೇವೆ. ಮತ್ತೊಂದು ದಿನ ಉತ್ತರ ಕೊಡುತ್ತೇವೆ.

ಅಧ್ಯಕ್ಷರು.—ಈಗ ಶ್ರೀ ಬಿ. ಆರ್. ನೀಲಕಂಠಪ್ಪನವರ ಪ್ರಶ್ನೆ.

(ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

(5) ರಾಣೆಬೆನ್ನೂರು ತಾಲ್ಲೂಕು ಗುಡ್ಡಾಪುರದಲ್ಲಿ ದನಗಳ ಜಾತ್ರೆಯಾಗುವ ಸ್ಥಳದಲ್ಲಿ ಮನೆಗಳನ್ನು ಕಟ್ಟುವುದು.

ಶ್ರೀ ಕೆ. ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ರಾಣೇಬೆನ್ನೂರ ತಾಲ್ಲೂಕ್ ಗುಡ್ಡಾಪುರ ಗ್ರಾಮದಲ್ಲಿ ಸರಕಾರಿ ಹಾಗೂ ದನಗಳ ಜಾತ್ರೆಯಾಗುವ ಸ್ಥಳದಲ್ಲಿ ಎಲ್ಲ ಕಾನೂನುಗಳನ್ನು ಉಲ್ಲಂಘಿಸಿ ಮನೆಕಟ್ಟಲು, ಕಂದಾಯ ನಿರೀಕ್ಷಕ ಮತ್ತು ಅದೇ ಗ್ರಾಮದ ಪಂಚಾಯಿತಿ ಆಡಳಿತಾಧಿಕಾರಿಯು ಜನರಿಗೆ ಪ್ರೋತ್ಸಾಹಿಸುವುದಲ್ಲದೆ ಕುಡಿಯುವ ನೀರಿನ ಪೈಪುಗಳನ್ನು ಒಡೆದು ಮನೆಕಟ್ಟಲು ನೀರು ಕೊಡುತ್ತಿರುವು ದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲದೆ ಸದರಿ ಅಧಿಕಾರಿಯನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಬೇಕೆಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೋಳಿವಾಡ್ ಅವರು ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ನಾನು ಕೊಡಲೇ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಅದರ ಮೇಲೆ ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

(6) ವಿಧಾನಸೌದದ ಮುಂಭಾಗದಲ್ಲಿ ಸ್ಥಾಪಿಸಿದ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಬಗ್ಗೆ ಅಸಮಾಧಾನ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ವಿಧಾನಸೌಧದ ಮುಂಭಾಗದಲ್ಲಿ ನಿಲ್ಲಿಸಿರುವ ಡಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಸಮರ್ಪಕವಾಗಿಲ್ಲದಿರುವ ಬಗ್ಗೆ ಹಲವಾರು ಈಗಾಗಲೇ ಅಸಮಾಧಾನ ವ್ಯಕ್ತ ಮಾಡಿದ್ದಾರೆ. ಕೆಂಗಲ್ ಹನುಮಂತಯ್ಯನವರ ಹೋಲಿಕೆಯೇ ಇಲ್ಲದ ಇಂತಹ ಪ್ರತಿಮೆಯನ್ನು ನಿರ್ಮಿಸಿ ವಿಧಾನಸೌಧದ ಮುಂದೆ ತಂದು ನಿಲ್ಲಿಸಿ, ರಾಷ್ಟ್ರಪತಿ ಶ್ರೀಯುತ ಜೈಲ್‌ಸಿಂಗ್ ಅವರಿಂದ ಅನಾವರಣಗೊಳಿಸಿದ ಅನುಚಿತ ಕೆಲಸಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಕೈಕೊಳ್ಳಲು ಹಾಗೂ ತೃಪ್ತಿಕರವಾದ ಬದಲಿ ಪ್ರತಿಮೆಯನ್ನು ನಿರ್ಮಿಸಿ ಸ್ಥಾಪಿಸಲು ತತ್‌ಕ್ಷಣ ಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ಸದರಿ ವಿಷಯದ ಬಗ್ಗೆ ಇದೇ ತಿಂಗಳು 15ನೇ ತಾರೀಖು ನಮ್ಮ ಬೆಂಗಳೂರು ನಗರಸಭೆಯ ಮಾಜಿ ಮೇಯರ್‌ಗಳಾದ ಶ್ರೀ ಲಿಂಗಯ್ಯನವರು, ಶ್ರೀ ತಿವಾರಿ ಅವರು, ಶ್ರೀ ಕೆ. ಎಂ. ನಂಜಪ್ಪನವರು, ಶ್ರೀ ತಿಮ್ಮರಾಯಿಗೌಡರು, ಶ್ರೀ ವಿ.ಆರ್. ನಾಯ್ಡು ಅವರು, ಶ್ರೀ ಎ. ಕೆ. ಅನಂತಕೃಷ್ಣ ಅವರು ಹಾಗೂ ಇತರರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಪ್ರಸ್ತಾಪ ಮಾಡಿದರು. ಅನಂತರ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಶ್ರೀ ಲಿಂಗಯ್ಯ

ನವರಿಗೆ ಒಂದು ಪತ್ರ ಬರೆದಿದ್ದಾರೆ. ಏನಂದರೆ, ದಿನಾಂಕ 15-7-85ರಂದು ದಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ವಿಷಯದಲ್ಲಿ ತಾವುಗಳು ಸಲ್ಲಿಸಿದ ಮನವಿ ನನ್ನ ಕೈಸೇರಿದೆ. ಅವರ ಸುಂದರ ಭಾವಚಿತ್ರದಂತೆ ಪ್ರತಿಮೆಯನ್ನು ನಿರ್ಮಿಸುವ ಸಲುವಾಗಿ ಶಿಲ್ಪಕಲಾಪರಿಣತರೊಬ್ಬರ ಹೆಸರನ್ನು ತಾವುಗಳು ಒಮ್ಮತದಿಂದ ಸೂಚಿಸಿದರೆ ಈ ಕೆಲಸವನ್ನು ಅವರಿಗೆ ಒಪ್ಪಿಸುವುದಕ್ಕೆ ನನ್ನ ಅಭ್ಯಂತರವೇನೂ ಇರುವುದಿಲ್ಲ ಎಂದು ಪತ್ರ ಬರೆದಿದ್ದಾರೆ. ಮುಂದೆ ಅವರಿಂದ ಉತ್ತರ ಬಂದಮೇಲೆ ಮುಂದಿನ ಕ್ರಮವನ್ನು ಸರ್ಕಾರ ಕೈಕೊಳ್ಳುತ್ತದೆಂದು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(7) ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಯಿಂದ ಕೆಳಗಿರುವ ಜನರ ಸಮೀಕ್ಷೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಎಲ್ಲ ಗ್ರಾಮಗಳಲ್ಲಿ ಬಡತನ ರೇಖೆಯಿಂದ ಕೆಳಗಿರುವ ಜನರ ಸಮೀಕ್ಷೆಯನ್ನು, ಸರ್ಕಾರದ ಸೌಲಭ್ಯವನ್ನು ಒದಗಿಸಲು ಸಂಬಂಧಪಟ್ಟ ಅಧಿಕಾರಿಗಳು ನಡೆಸುತ್ತಿದ್ದು, ಇಂತಹ ಸಮೀಕ್ಷೆಯನ್ನು ನಗರ ಪ್ರದೇಶಗಳಲ್ಲಿ, ತಾಲ್ಲೂಕ್ ಕೇಂದ್ರುಗಳಲ್ಲಿ ನಡೆಸುತ್ತಿಲ್ಲವೆಂದು ತಿಳಿದು ಬಂದಿದೆ. ಅದೇ ರೀತಿ ಗ್ರಾಮಗಳಲ್ಲಿ ವಾಸ ಮಾಡುವ ಬಡವರಲ್ಲೂ ನೂರಕ್ಕೆ 50 ಜನರನ್ನು ಕೈಬಿಡುತ್ತಿರುವುದು ತಿಳಿದು ಬಂದಿರುತ್ತೆ. ಆದ್ದರಿಂದ ಕಡುಬಡವರಿಗೆ ಸಂಬಂಧಪಟ್ಟ ಸಾರ್ವಜನಿಕ ಮಹತ್ವವಾದ ಈ ವಿಷಯದ ಬಗ್ಗೆ ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, 20 ಅಂಶಗಳ ಕಾರ್ಯಕ್ರಮದ ಕೆಳಗೆ ಬಡತನದ ರೇಖೆಯಿಂದ ಕೆಳಗಿರುವ ಜನರ ಒಂದು ಸಮೀಕ್ಷೆಯನ್ನು ನಮ್ಮ ಅಧಿಕಾರಿಗಳು ಸರ್ಕಾರದ ನೀತಿಯ ಪ್ರಕಾರ ಮಾಡುತ್ತಿದ್ದಾರೆ. ಈಗ ಇದು ನಗರ ಪ್ರದೇಶಗಳಿಗೆ ಅನ್ವಯವಾಗುವುದಿಲ್ಲ, ನಮ್ಮ ಈಗಿನ ಹೊಸ ಯೋಜನೆಗಳನ್ನು ನಗರ ಪ್ರದೇಶಗಳಲ್ಲಿಯೂ ಸಹ ಅನ್ವಯ ಮಾಡುವ ಸಂದರ್ಭ ಬಂದಾಗ ಅಲ್ಲಿಯೂ ಸಮೀಕ್ಷೆಯನ್ನು ಮಾಡುತ್ತೇನೆ. ಈಗ ನಡೆಸುತ್ತಿರುವ ಸಮೀಕ್ಷೆಯಲ್ಲಿ ಕೆಲವು ಜನರ ಹೆಸರುಗಳು ಬಿಟ್ಟು ಹೋಗುತ್ತಿವೆ ಎಂದು ಹೇಳಿದ್ದಾರೆ. ಈಗ ನಮ್ಮ ಅಧಿಕಾರಿಗಳು ಸರ್ಕಾರದ ಆದೇಶದ ಪ್ರಕಾರ ಸಮೀಕ್ಷೆ ಮಾಡುತ್ತಿದ್ದಾರೆ. ಒಂದುವೇಳೆ ಯಾವುದಾದರೂ ಹಳ್ಳಿಗಳು ಬಿಟ್ಟು ಹೋಗಿದ್ದರೆ, ಅದನ್ನು ನಮ್ಮ ಗಮನಕ್ಕೆ ತಂದರೆ, ನಾವು ಅವುಗಳನ್ನೂ ಸಹ ಸೇರಿಸಿಕೊಳ್ಳುತ್ತೇವೆ.

(8) ಹುಣಸೂರು, ಪೆರಿಯಪಟ್ಟಣ ಮತ್ತು ಹೆಚ್.ಡಿ. ಕೋಟೆ, ಕೆ.ಆರ್. ನಗರದಲ್ಲಿ ಹೊಗೆಸೊಪ್ಪು ಬೇಯಿಸಲು ರೈತರಿಗೆ ಸೌದೆ ಒದಗಿಸುವುದು.

ಶ್ರೀ ಕೆ. ವೆಂಕಟೇಶ್.—ಮಾನ್ಯ ಅಧ್ಯಕ್ಷರೆ, ವರ್ಜೀನಿಯಾ ಹೊಗೆಸೊಪ್ಪನ್ನು ಹೆಚ್ಚಾಗಿ ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ. ಕೋಟೆ, ಕೆ.ಆರ್. ನಗರಗಳಲ್ಲಿ ರೈತರು ಹೆಚ್ಚಾಗಿ ಬೆಳೆಯುತ್ತಿದ್ದು, ಈಗ ಈ ಹೊಗೆಸೊಪ್ಪನ್ನು ಬೇಯಿಸಲು ಬೇಕಾದ ಸೌದೆ ಮತ್ತು ಕಲ್ಲಿದ್ದಲ್ಲು ಸಿಗದೆ ಬಹಳ ತೊಂದರೆ ಗೀಡಾಗಿದ್ದಾರೆ. ಆದ್ದರಿಂದ ಸರ್ಕಾರದವರು ಕೂಡಲೇ ಮೇಲ್ಕಂಡ ಪ್ರದೇಶಗಳಲ್ಲಿ ಹೊಗೆಸೊಪ್ಪು ಬೆಳೆಯತಕ್ಕ ರೈತರಿಗೆ ಬೇಯಿಸಲು ಬೇಕಾದ ಸೌದೆ ಮತ್ತು ಕಲ್ಲಿದ್ದಲನ್ನು ಒದಗಿಸಲು ಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಈ ವಿಷಯವನ್ನು ಈಗ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಮಾಹಿತಿ ತರಿಸಿಕೊಂಡು ಉತ್ತರ ಕೊಡುತ್ತೇನೆ.

(9) ಪಂಚಾಯತ್ ನೌಕರರಿಗೆ ಹೆಚ್ಚಿನ ವೇತನ ಶ್ರೇಣಿ ಕೊಡುವುದು.

ಶ್ರೀ ಕೆ. ವಸಂತಬಂಗೇರ.—ಮಾನ್ಯ ಅಧ್ಯಕ್ಷರೇ, ಸುಮಾರು 15 ವರ್ಷಕ್ಕೂ ಮೇಲ್ಪಟ್ಟು ಪಂಚಾಯತ್ ನೌಕರರಾಗಿ ಕೇವಲ 20,30,50 ರೂಪಾಯಿಗಳ ಮಾಸಿಕ ವೇತನದಲ್ಲಿ ದುಡಿಯುತ್ತಿದ್ದ ಪಂಚಾಯತ್ ನೌಕರರು, ತಮ್ಮನ್ನು ಸರಕಾರಿ ನೌಕರರನ್ನಾಗಿ ಮಾಡುವುದಲ್ಲದೇ 1977 ಮತ್ತು 1982ರ ವೇತನ ಶ್ರೇಣಿ ನೀಡುವಂತೆ ಸರ್ಕಾರವನ್ನು ಪದೇಪದೇ ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಅವರ ಈ ಒತ್ತಾಯ ಬೇಡಿಕೆಗಳಿಗೆ ಉತ್ತರವಾಗಿ ವಿಭಾಗಾಧಿಕಾರಿಗಳು, ಪಂಚಾಯತ್ ನೌಕರರನ್ನು ಕೆಲಸದಿಂದ ವಿಮುಕ್ತಗೊಳಿಸುವಂತೆ ಆಜ್ಞೆಯನ್ನು ಹೊರಡಿಸಿರುತ್ತಾರೆ. ಸುಮಾರು 15 ವರ್ಷಗಳಿಗೂ ಮೇಲ್ಪಟ್ಟು ಅಲ್ಪ ವೇತನಕ್ಕೆ ದುಡಿದ ಈ ಪಂಚಾಯತ್ ನೌಕರರಿಗೆ ರಕ್ಷಣೆ ಕೊಡಬೇಕಾದ ಸರ್ಕಾರವೇ ಈ ರೀತಿ ಆಜ್ಞೆ ಹೊರಡಿಸಿದ್ದು ಅನ್ಯಾಯವಲ್ಲವೇ ? ಸದರಿ ಪಂಚಾಯತ್ ನೌಕರರಿಗೆ ರಕ್ಷಣೆ ಕೊಡುವ ನಿಟ್ಟಿನಲ್ಲಿ ಪಂಚಾಯತ್ ನೌಕರರನ್ನು ಕೆಲಸದಿಂದ ವಿಮುಕ್ತಿಗೊಳಿಸುವಂತೆ ಹೊರಡಿಸಿದ ಆಜ್ಞೆಗೆ ತಡೆಯಾಜ್ಞೆ ನೀಡುವಿರಾ ? ಅಲದೇ ಪಂಚಾಯತ್ ನೌಕರರನ್ನು ಸರಕಾರೀ ನೌಕರರೆಂದು ಪರಿಗಣಿಸಿ 1977 ರಿಂದ ವೇತನ ಶ್ರೇಣಿಯನ್ನು ನೀಡಿ 'ಜೀವ ವಿಮುಕ್ತ'ರನ್ನಾಗಿ ಮಾಡುವಿರಾ ? ಹಾಗಿದ್ದಲ್ಲಿ ಯಾವಾಗ